ಆದರೂ ಸಹ ರದ್ದುಪಡಿಸಿದ ಬಿಪಿಎಲ್ ಕಾರ್ಡುದಾರರು ಹಾಗೂ ಬಿಪಿಎಲ್‌ನಿಂದ ಎಪಿಎಲ್‌ಗೆ ಮಾರ್ಪಡಿಸಿದ ಕಾರ್ಡುದಾರರು ಭಾಲ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,464 ಅರ್ಜಿಗಳನ್ನು ಸಲ್ಲಿಸಿ ಮತ್ತೆ ಬಿಪಿಎಲ್ ಕಾರ್ಡು ವಿತರಿಸಲು ಕೋರಿರುತ್ತಾರೆ.

ಉ) ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಬಂದ ಅರ್ಜಿಗಳನ್ನು ಪುನರ್ ಪರಿಶೀಲನೆಗಾಗಿ ಗ್ರಾಮ ಲೆಕ್ಕಧಿಕಾರಿಗಳಿಗೆ ನೀಡಲಾಗಿರುತ್ತದೆ. ಪರಿಶೀಲನೆ ಕಾರ್ಯ ಪ್ರಗತಿಯಲ್ಲಿರುತ್ತದೆ.

ಕಬ್ಬನ್ ಉದ್ಯಾನವನದ ಅಭಿವೃದ್ಧಿ

982 (1520) ಶ್ರೀ ಹ್ಯಾರೀಸ್ ಎನ್. ಎ. (ಶಾಂತಿನಗರ) : ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಸುಪ್ರಸಿದ್ಧ ಕಬ್ಬನ್ ಉದ್ಯಾನವನವನ್ನು ಅಭಿವೃದ್ಧಿ ಪಡಿಸುವಲ್ಲಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳೇನು (ಕಳೆದ ಎರಡು ವರ್ಷಗಳಲ್ಲಿ ನಡೆದ ಅಭಿವೃದ್ಧಿ ವಿವರ ನೀಡುವುದು);

ಆ) ಕಬ್ಬನ್ ಉದ್ಯಾನವನದಲ್ಲಿರುವ ಮರಗಳ ಸಂಖ್ಯೆಯು ಕಡಿಮೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಮರಗಳ ಸಂರಕ್ಷಣೆ ಮತ್ತು ಉದ್ಯಾನವನದಲ್ಲಿರುವ ಸೂಕ್ತ ಮೂಲಭೂತ ಸೌಕರ್ಯಗಳನ್ನು ವ್ಯವಸ್ಥೆಗೊಳಿಸಲು ಹಮ್ಮಿಕೊಂಡ ಕ್ರಮಗಳೇನು;

ಇ) ಕಬ್ಬನ್ ಉದ್ಯಾನವನಕ್ಕೆ ಸರ್ಕಾರ ಕಳೆದ ಎರಡು ವರ್ಷಗಳಲ್ಲಿ ನೀಡಿರುವ ಅನುದಾನದ ವಿವರಗಳೇನು;

ಈ) ಉದ್ಯಾನವನವನ್ನು ಉತ್ತಮ ವ್ಯವಸ್ಥೆಯಲ್ಲಿರುವಂತೆ ಮಾಡಲು ಇಲಾಖೆಯ ಯೋಜನೆಗಳೇನು;

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) :

ಅ) ಕಬ್ಬನ್ ಉದ್ಯಾನವನವನ್ನು ಅಭಿವೃದ್ಧಿಪಡಿಸುವಲ್ಲಿ ಹಮ್ಮಿಕೊಂಡಿರುವ ಯೋಜನೆಗಳು ಮತ್ತು ಕಳೆದ ಎರಡು ವರ್ಷಗಳಲ್ಲಿ (2007–08 ಮತ್ತು 2008–09) ನಡೆದ ಅಭಿವೃದ್ಧಿ ವಿವರ ಇಂತಿದೆ.

ಕ್ರ ಸಂ.	ಅಭಿವೃದ್ಧಿ ವಿವರಗಳು
1	ಬ್ಯಾಂಡ್ ಸ್ಟಾಂಡ್, ಟೆನ್ನಿಸ್ ಸ್ಟೇಡಿಯಂ ಮುಂಭಾಗ, ಕಛೇರಿಯ ಪಕ್ಕದಲ್ಲಿ ಮತ್ತು ಹೈಕೋರ್ಟ್ ಬಳಿ ಉದ್ಯಾನವನ ಅಭಿವೃದ್ಧಿ
2	ಸುಭಾಶ್ ಚಂದ್ರ ಬೋಸ್, ಜವಾಹರಲಾಲ್, ಅಂಬೇಡ್ಕರ್, ಜಯಚಾಮರಾಜೇಂದ್ರ, ವಿಕ್ಟೋರಿಯಾ ಮತ್ತು ಮಹಾರಾಜ ಪ್ರತಿಮೆಗಳ ಪ್ರದೇಶದಲ್ಲಿ ಉದ್ಯಾನವನ ಅಭಿವೃದ್ಧಿ
3	ಗುಲಾಬಿ ತೋಟಗಳ ಪುರ್ನಜೀವನ
4	ಕಬ್ಬನ್ ಉದ್ಯಾನವನ ಹಾಗೂ ಇಂದಿರಾಗಾಂಧಿ ಸಂಗೀತ ಕಾರಂಜಿ ಉದ್ಯಾನವನಗಳಲ್ಲಿ ಮಳೆ ನೀರು ಶೇಖರಣಾ ಗುಂಡಿಗಳನ್ನು ತೆಗೆಸುವುದು
5	ನೆರಳು ಉದ್ಯಾನವನ ಅಭಿವೃದ್ಧಿ
6	ಹುಲ್ಲುಹಾಸಿಗೆ, ಅಲಂಕಾರಿಕ ಬೇಲಿ ಅಳವಡಿಕೆ; ಕಾಂಪೌಂಡ್ ಗೋಡೆ ದುರಸ್ಥಿ ಮತ್ತು ಪಾತ್ ವೇ ನಿರ್ಮಾಣ
7	ಜಾವಾಫಿಗ್ ಅವನ್ಯೂ ರಸ್ತೆ ಬದಿಗಳಲ್ಲಿ ಪಾದಚಾರಿ ಮಾರ್ಗಕ್ಕೆ ಚೈನ್‌ಲಿಂಕ್ ಕರ್ಬ್‌ಸ್ಟೋನ್ ಅಳವಡಿಕೆ
8	ಕಬ್ಬನ್ ಉದ್ಯಾನವನದಲ್ಲಿ ನೀರಿನ ಸೌಕರ್ಯಕ್ಕಾಗಿ ಸಿಪೇಜ್ ವಾಟರ್ ಕಾಲುವೆಗೆ ಚೆಕ್‌ಡ್ಯಾಂ/Piching ನಿರ್ಮಾಣ
9	ವಿಕಾಸ ಸೌಧದ ಉದ್ಯಾನವನಕ್ಕೆ ಪೈಪ್ ಲೈನ್/ತುಂತುರು ನೀರಾವರಿ ಅಳವಡಿಕೆ
10	ಕರಗದ ಕುಂಟೆ ಕಲ್ಯಾಣಿ ದುರಸ್ಥಿ ಮತ್ತು ಸುತ್ತಮುತ್ತಲಿನ ಪ್ರದೇಶವನ್ನು

	ಅಭಿವೃದ್ಧಿಪಡಿಸುವುದು
11	ತೋಟಗಾರಿಕೆ ಪರಿಕರಗಳ ಖರೀದಿ
12	ಮಳೆ ಗಾಳಿಗೆ ಬಿದ್ದಿರುವ ಮರಗಳನ್ನು ತಕ್ಷಣವೇ ತೆಗೆದು ಖಾಲಿ ಜಾಗಗಳಲ್ಲಿ ಹೊಸದಾಗಿ ಮರ ಜಾತಿಯ ಗಿಡಗಳನ್ನು ನಾಟಿ ಮಾಡಿ ಸಂರಕ್ಷಿಸಲಾಗುತ್ತಿದೆ.

ಆ) ಹೌದು, ಮಳೆ ಗಾಳಿಗೆ ಬಿದ್ದಿರುವ ಮರಗಳನ್ನು ತಕ್ಷಣವೇ ತೆಗೆದು ಖಾಲಿ ಜಾಗಗಳಲ್ಲಿ ಹೊಸದಾಗಿ ಮರ ಜಾತಿಯ ಗಿಡಗಳನ್ನು ನಾಟಿ ಮಾಡಿ ಸಂರಕ್ಷಿಸಲಾಗುತ್ತಿದೆ.

ಮೇಲಿನಂತೆ

ಇ)

ವರ್ಷ	ಅನುದಾನ (ರೂ.ಕೋಟಿಗಳಲ್ಲಿ)
2007–08	1.43
2008–09	3.56

ಈ) ಮೇಲಿನ (ಅ) ನಲ್ಲಿರುವಂತೆ

ಸಂಕಷ್ಟದಲ್ಲಿರುವ ಸಕ್ಕರೆ ಕಾರ್ಖಾನೆಗಳು

983 (1521) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ ನಷ್ಟವನ್ನು ಹೊಂದಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು? ಅವುಗಳು ನಷ್ಟವನ್ನು ಅನುಭವಿಸಲು ಕಾರಣಗಳೇನು?

ಆ) ನಷ್ಟದ ಹಿನ್ನೆಲೆ ಇರುವ ಎಷ್ಟು ಕಾರ್ಖಾನೆಗಳನ್ನು ಸರ್ಕಾರ ಮುಚ್ಚಲು ಅಥವಾ ಖಾಸಗಿಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಉದ್ದೇಶಿಸಿದೆ (ವಿವರ ನೀಡುವುದು)?

ಇ) ಕಬ್ಬು ಉತ್ಪಾದನಾ ಪ್ರಮಾಣದ ಏರಿಳಿತಕ್ಕೆ ಕಾರಣಗಳೇನು; (ವಿವರ ನೀಡುವುದು)?